ಕುಂದಾಪುರ ತಾಲ್ಲೂಕಿನಲ್ಲಿ ಬೀದಿ ದೀಪವನ್ನು ಒದಗಿಸಂಬ ಕುರಿತು

೧೨೮೬(೨೫೫೦) ಶ್ರೀ ವಸಂತ ವಿ. ಸಾಲಿಯಾನ (ಕಾಪು).— ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕುಂದಾಪುರ ತಾಲ್ಲೂಕಿನಲ್ಲಿ ಬೀದಿ ದೀಪಗಳನ್ನು ಹಾಕದೆ ಇರುವ ಗ್ರಾಮಗಳ ಸಂಖ್ಯೆ ಎಷ್ಟು ?

ಆ) ಕಳೆದ ೫ ವರ್ಷಗಳಿಂದ ದಾರಿ ದೀಪಕ್ಕಾಗಿ ಮನವಿಯನ್ನು ಸಲ್ಲಿಸಿದರೂ ಬೀದಿ ದೀಪವನ್ನು ಹಾಕದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

ಅ) ೨೬ ಗ್ರಾಮಗಳು.

ಆ) ೧೯೮೫ಕ್ಕೆ ಮುಂಚೆ ಬೀದಿ ದೀಪಕ್ಕಾಗಿ ಯಾವ ಮನವಿಯೂ ಬಂದಿರಲಿಲ್ಲ.

ಇ) ಈವರೆಗೆ ೭ ಮನವಿಗಳು ಬಂದಿದ್ದು ಅವುಗಳ ಪೈಕಿ ಎರಡು ಗ್ರಾಮಗಳ ಬೀದಿ ದೀಪಗಳ ಕೆಲಸ ಪೂರೈಸಿದೆ. ೩ ಗ್ರಾಮಗಳ ಕೆಲಸ ಕೈಗೆತ್ತಿಕೊಳ್ಳಬೇಕಾಗಿದೆ. ಒಂದರ ಅಂದಾಜು ತಯಾರಾಗುತ್ತಿದೆ. ಒಂದು ಗ್ರಾಮದ ವಿಷಯ ಪರಿಶೀಲನೆಯಲ್ಲಿದೆ.

ಸರಕಾರಿ ಪಶುಸಂಗೋಪನೆ ಆಸ್ಪತ್ರೆಯೆಂನ್ನು ತೆರೆಯುವ ಬಗ್ಗೆ

೧೨೮೭(೨೧೩೮) ಶ್ರೀ ವಸಂತ ವಿ. ಸಾಲಿಯಾನ, (ಕಾಪು).—ಮಾನ್ಯ ವಸತಿ, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಮಂಡಲಕ್ಕೆ ಒಂದು ಸರ್ಕಾರಿ ಪಶು ಸಂಗೋಪನಾ ಆಸ್ಪತ್ರೆ ತೆರೆಯಲು ಸರ್ಕಾರವು ಯೋಚಿಸಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಮಹಮ್ಮದ್ ಮೊಯಿನುದ್ದೀನ್ (ವಸತಿ, ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕೈಗಾರಿಕೆಗಳಿಂದ ವಾತಾವರಣ ಮಾಲಿನ್ಯ

೧೨೮೮(೧೧೭೭) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ''ವಾತಾವರಣ ಮಾಲಿನ್ಯ'' ಉಂಟುಮಾಡುತ್ತಿರುವ ಕೈಗಾರಿಕೆಗಳ (ಪ್ರತಿ ಉದ್ಯಮದ ವಿವರಗಳು) ವಿವರಗಳನ್ನೊದಗಿಸುವುದು ?

ಆ) 'ವಾತಾವರಣ ಮಾಲಿನ್ಯ' ತಡೆಯಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಇ) ಕಾನೂನು ಉಲ್ಲಂಘಿಸಿರುವ ಉದ್ಯಮಗಳ ಮೇಲೆ ಸರಕಾರವು ಕ್ರಮಕೈಗೊಂಡಿದೆಯೆ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾತಾವರಣಕ್ಕೆ ಗಾಳಿಯನ್ನು ಹೊರಸೂಸುವ ೫೧೦ ಉದ್ಯಮಗಳನ್ನು ಗುರುತಿಸಿದೆ. ಇವುಗಳಲ್ಲಿ ೯೯ ಉದ್ಯಮಗಳು ಮಲಿನ